ಆ) ಆ ಬಗ್ಗೆ ಕೇಂದ್ರ ಸರ್ಕಾರದಿಂದ ಬಂದ ಹಣವೆಷ್ಟು. ಆದರಲ್ಲಿ ಯಾವ ಯಾವ ಬಾಬುಗಳ ಬಗ್ಗೆ ಎಷ್ಟೆಷ್ಟು ಖರ್ಚಾಗಿದೆ?

ಶ್ರೀ ಬಸವರಾಜ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಆ) ಗದಗ ತಾಲ್ಲೂಕಿನ ಹುಲ್‌ಕೋಟಿಯ ಕೃಷಿ ವಿಜ್ಞಾನ ಸಂಸ್ಥೆಯಿಂದ ಹತ್ತಿ ಸಂಶೋಧನೆ ತೆಗೆದುಕೊಳ್ಳಲು ಪರವಾನಗಿ ಕೋರಿ ಒಂದು ಅರ್ಜಿ ಮಾತ್ರ ಬಂದಿರುತ್ತದೆ. ಈ ಅರ್ಜಿಯು ೧೯೮೬ರ ಜೂನ್ ತಿಂಗಳಿನಲ್ಲಿ ಬಂದಿದ್ದು ಇದನ್ನು ಪರಿಶೀಲಿಸಲಾಗುತ್ತಿದೆ. ಈ ಬಗ್ಗೆ ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳಲಾಗುವುದು.

ಆ) ಏನೂ ಇಲ್ಲ.

ಗುತ್ತಿಗೆ ಆಧಾರದ ಉಪಾಧ್ಯಾಯರ ಹಾಗೂ ಉಪನ್ಯಾಸಕರ ಬಗ್ಗೆ

೧೪೯ (೭೩) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡ ಶಿಕ್ಷಕರ ಹಾಗೂ ಕಾಲೇಜು ಉಪನ್ಯಾಸಕರುಗಳ ಸಂಖ್ಯೆ ಎಷ್ಟು?

ಆ) ಸದರಿ ಶಿಕ್ಷಕರನ್ನು ಹಾಗೂ ಉಪನ್ಯಾಸಕರನ್ನು ಖಾಯಂಗೊಳಿಸಲಾಗಿದೆಯೇ ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು?

ಇ) ಆ ಪೈಕಿ ಕೆಲವು ಮಂದಿ ಶಿಕ್ಷಕರನ್ನು ಹಾಗೂ ಉಪನ್ಯಾಸಕರನ್ನು ಕೆಲಸದಿಂದ ತೆಗೆದು ಹಾಕಲಾಗಿರುವುದು ನಿಜವೇ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಪ್ರಾಥಮಿಕ ಶಾಲಾ ಶಿಕ್ಷಕರು	—	೩,೭೨೬
೨) ಪ್ರೌಢಶಾಲಾ ಸಹಾಯಕ ಶಿಕ್ಷಕರು	—	೫,೦೧೦
೩) ಕಿರಿಯ ಕಾಲೇಜು ಉಪನ್ಯಾಸಕರುಗಳು	—	೮೫೯
೪) ಪ್ರಥಮ ದರ್ಜೆ ಕಾಲೇಜು ಶಿಕ್ಷಕರು	—	೫೪೪
೫) ಪಾಲಿಟೆಕ್ನಿಕ್ ಉಪನ್ಯಾಸಕರು	—	೧೦೭
		೧೦,೩೫೦

ಆ) ಇವರನ್ನು ಕರಾರು ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ. ಇವರ ಸೇವೆಯನ್ನು ಖಾಯಂಗೊಳಿಸಲು ಹಾಲಿ ಇರುವ ನಿಯಮಾವಳಿಗಳ ಪ್ರಕಾರ ಅವಕಾಶವಿಲ್ಲ.

ಇ) ಹೌದು.

ಜಿಲ್ಲಾ ಕಛೇರಿ ಕಟ್ಟಡಗಳ ಬಗ್ಗೆ

೧೫೦ (೫೨೬ ಎ) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೋಲಾರ ಜಿಲ್ಲಾ ಕೇಂದ್ರದಲ್ಲಿ ರೆವಿನ್ಯೂ ಇಲಾಖಾ ಮಿನಿ ಸೌಧ, ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಮತ್ತು ಅಬ್ಕಾರಿ ಇಲಾಖೆ ಹಾಗೂ ಪೌರ್ತ ಮತ್ತು ಪ್ರಚಾರ ಇಲಾಖೆ, ಇತರೆ ಇಲಾಖೆಗಳ ಕಛೇರಿಗಳಿಗೆ ಸ್ವಂತ ಕಟ್ಟಡಗಳಿಲ್ಲದಿರುವುದರಿಂದ ಈ ಸಾಲಿನ ಆಯವ್ಯಯದಲ್ಲಿ ಇದನ್ನು ಸೇರಿಸಲಾಗುವುದೇ?

ಆ) ರೈಪಿನ್ಗ್ ಇಲಾಖಾ ಕಟ್ಟಡಗಳು ಹಳೆಯದಾಗಿದ್ದು ಶಿಥಿಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಬೇರೆ ಜಿಲ್ಲೆಗಳಂತೆ ಇಲ್ಲಿಯೂ ಜಿಲ್ಲಾ ಇಲಾಖಾಧಿಕಾರಿಗಳಿಗೆ ಕಟ್ಟಡಗಳನ್ನು ಕಟ್ಟಿಸಲಾಗುವುದೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಆ) ಈ ಕೆಲಸಗಳು ೧೯೮೬–೮೭ನೇ ಸಾಲಿನ ಆಯವ್ಯಯದಲ್ಲಿ ಸೇರಿರುವುದಿಲ್ಲ.

ಆ) ಹಳೆಯದಾಗಿದೆ ಎಂದು ತಿಳಿದಿದೆ.

ಇ) ಈ ಬಗ್ಗೆ ಆವಶ್ಯಕತೆ ಮತ್ತು ಹಣಕಾಸಿನ ಪರಿಸ್ಥಿತಿಯ ಮೇರೆಗೆ ನಿರ್ಣಯ ತೆಗೆದುಕೊಳ್ಳಬೇಕಾಗುವುದು.

೬ ಹಳ್ಳಿಗಳಿಗೆ ರಸ್ತೆ ಸೌಲಭ್ಯವನ್ನು ಒದಗಿಸುವ ಬಗ್ಗೆ

೧೫೧೧ (೫೨೪) ಶ್ರೀ ಆರ್. ವೆಂಕಟರಾವಪ್ಪ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ, ಆಯ್ಕೆಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದ ಎಷ್ಟು ಗ್ರಾಮಗಳಿಗೆ ರಸ್ತೆ ಸಂಪರ್ಕಗಳಿವೆ? ಹಾಗೂ ಎಷ್ಟು ಗ್ರಾಮಗಳಿಗೆ ರಸ್ತೆ ಸಂಪರ್ಕ ಇಲ್ಲ? ಸಂಪರ್ಕವಿಲ್ಲದೆ ಇರುವ ಗ್ರಾಮಗಳಿಗೆ ರಸ್ತೆಗಳನ್ನು ಈ ಸಾಲಿನಲ್ಲಿ ಮಾಡಿಸಲಾಗುವುದೇ?

ಆ) ಇಲ್ಲದಿದ್ದರೆ ಮುಂದಿನ ಸಾಲಿನಲ್ಲಾದರೂ ಎಲ್ಲಾ ಹಳ್ಳಿಗಳಿಗೆ ರಸ್ತೆ ಸೌಲಭ್ಯ ಪೂರ್ತಿ ಮಾಡಲಾಗುವುದೇ?

ಇ) ಹಳ್ಳಿಗಳಿಗೆಲ್ಲಾ ರಸ್ತೆ ಸೌಲಭ್ಯ ಕಲ್ಪಿಸಲು ಸರ್ಕಾರದವರ ಯೋಜನೆ ಏನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಆ) ಮತ್ತು ಆ) ತಾರೀಖು ೩೧ನೇ ಮಾರ್ಚ್ ೧೯೮೬ರ ವೇಳೆಗೆ ರಾಜ್ಯದಲ್ಲಿರುವ ೨೭,೦೨೮ ಹಳ್ಳಿಗಳಲ್ಲಿ, ೨೬,೭೪೧ ಗ್ರಾಮಗಳಿಗೆ ರಸ್ತೆ ಸಂಪರ್ಕವಿದೆ. ಈ ಪೈಕಿ ೧೦,೬೮೫ ಗ್ರಾಮಗಳಿಗೆ ಸರ್ವಋತು ರಸ್ತೆ ರಸ್ತೆಗಳೂ, ೬೮೫೦ ಗ್ರಾಮಗಳಿಗೆ ಉತ್ತಮ ಹವಮಾನ ರಸ್ತೆಗಳೂ ಉಳಿದ ೯೨೦೬ ಗ್ರಾಮಗಳಿಗೆ ಕಚ್ಚಾ ರಸ್ತೆಯೂ ಇದೆ. ಇನ್ನುಳಿದ ೨೮೭ ಗ್ರಾಮಗಳಿಗೆ ರಸ್ತೆ ಸಂಪರ್ಕವಿಲ್ಲ. ಸಂಪರ್ಕವಿಲ್ಲದ ಗ್ರಾಮಗಳಿಗೆ ರಸ್ತೆ ನಿರ್ಮಾಣ ಕೆಲಸವನ್ನು ಹಣಕಾಸಿನ ಲಭ್ಯತೆಗನುಗುಣವಾಗಿ ಹಂತ-ಹಂತವಾಗಿ ತೆಗೆದುಕೊಳ್ಳಲಾಗುತ್ತದೆ.

ಇ) ಸರ್ವಋತು ಸಂಪರ್ಕ ಇಲ್ಲದಿರುವ ಹಳ್ಳಿಗಳಿಗೂ ಮತ್ತು ಯಾವ ತರಹ ರಸ್ತೆಯೂ ಇಲ್ಲದಿರುವ ಹಳ್ಳಿಗಳಿಗೂ ಲೋಕೋಪಯೋಗಿ ಇಲಾಖೆಯ ವತಿಯಿಂದ ಎಂ. ಎನ್. ಪಿ. ಆರ್. ಎಪ್. ಇ. ಜಿ. ಪಿ. ಮತ್ತು ಹಳ್ಳಿಯ ಹೆದ್ದಾರಿ ಕಾರ್ಯಕ್ರಮಗಳಲ್ಲಿ ಹಣದ ಲಭ್ಯತೆಯನ್ನಾಧರಿಸಿ ಹಂತ-ಹಂತವಾಗಿ ರಸ್ತೆಗಳ ಕೆಲಸವನ್ನು ಮಾಡಲಾಗುತ್ತಿದೆ.

ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ನಿಗಧಿ ಪಡಿಸಿದ ಒಟ್ಟು ಅನುದಾನದ ಬಗ್ಗೆ

೧೫೭೭ (೧೦೭) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ :—

ಧಾರವಾಡ ೧೯೮೬–೮೭ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ನಿಗಧಿಪಡಿಸಿದ ಒಟ್ಟು ಅನುದಾನದ ಮೊತ್ತ?